# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ :**416**

ಸದಸ್ಯರ ಹೆಸರು : ಶ್ರೀ ಕೆ. ಅಬ್ದುಲ್ ಜಬ್ಬರ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 10-12-2025

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಇರುವಂತಹ ಆರ್.ಟಿ.ಓ. ಕಛೇರಿಗಳ ಸಂಖ್ಯೆ ಎಷ್ಟು; ಇರುವಂತಹ ಬಹುತೇಕ ಆರ್.ಟಿ.ಓ. ಕಛೇರಿಗಳಲ್ಲಿ ಅಕ್ರಮಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದಲ್ಲಿ ಸಾರಿಗೆ ಇಲಾಖೆಯ ಒಟ್ಟು 67 ಉಪ ಸಾರಿಗೆ ಆಯುಕ್ತರು & ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ / ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ.<br>ಇವುಗಳಲ್ಲಿ ಈ ಕೆಳಕಂಡ ಎರಡು (2) ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಮಾತ್ರ ಅಕ್ರಮ ನಡೆದಿರುವುದು ಗಮನಕ್ಕೆ ಬಂದಿರುತ್ತದೆ.<br><table><tr><th>ಕ್ರ.ಸಂ.</th><th>ಕಛೇರಿ</th><th>ಅವಧಿ</th></tr><tr><td>1.</td><td>ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ)</td><td>ಏಪ್ರಿಲ್ 2015 ರಿಂದ ನವೆಂಬರ್ 2021</td></tr><tr><td>2.</td><td>ಪ್ರಾದೇಶಿಕ ಸಾರಿಗೆ ಕಛೇರಿ ಎಲೆಕ್ಟ್ರಾನಿಕ್ ಸಿಟಿ</td><td>2005 ರಿಂದ 2023</td></tr></table></td></tr>
<tr><td>ಆ.</td><td>ಬಂದಿದ್ದಲ್ಲಿ, ಯಾವ ಯಾವ ಕಛೇರಿಗಳಲ್ಲಿ ಅಕ್ರಮ ನಡೆಯುತ್ತಿವೆ ಎಂಬುದರ ಮಾಹಿತಿಯನ್ನು ಸಂಗ್ರಹಿಸಲಾಗಿದೆ;</td><td>1. ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ) ಕಛೇರಿಯಲ್ಲಿ ಏಪ್ರಿಲ್ 2015 ರಿಂದ ನವೆಂಬರ್ 2021ರ ವರೆಗಿನ ಅವಧಿಯಲ್ಲಿ ನೋಂದಣಿಯಾಗಿರುವ ಐಷಾರಾಮಿ ಕಾರುಗಳ ತೆರಿಗೆ ವಂಚನೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಹಾಲೇಖಪಾಲರು, ಬೆಂಗಳೂರು ಇವರಿಂದ ತಪಾಸಣಾ ವರದಿಯನ್ನು ದಿನಾಂಕ:21.10.2024ರಂದು ಪಡೆಯಲಾಗಿರುತ್ತದೆ.<br>ಈ ಬಗ್ಗೆ, ಪರಿಶೀಲಿಸಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು (ಕೇಂದ್ರ) ಕಛೇರಿಯಲ್ಲಿ ಐಷಾರಾಮಿ ಕಾರುಗಳ ತೆರಿಗೆ ವಂಚನೆ ಮಾಡಿರುವ ಪ್ರಕರಣದ ಬಗ್ಗೆ, ಒಟ್ಟು 09 ಆರೋಪಿತ ಅಧಿಕಾರಿ/ ನೌಕರರಿಗೆ ದಿನಾಂಕ:12.08.2025 ರಂದು ದೋಷಾರೋಪಣಾ ಪಟ್ಟಿಗಳನ್ನು ಜಾರಿ ಮಾಡಲಾಗಿರುತ್ತದೆ. ಇವರಲ್ಲಿ ಕೆಲವರು ರಕ್ಷಣ ಹೇಳಿಕೆಗಳನ್ನು ಸಲ್ಲಿಸಿದ್ದು, ಮತ್ತೆ ಕೆಲವರು ಹೇಳಿಕೆ ಸಲ್ಲಿಸಲು ಸಂಬಂಧ ಪಟ್ಟ ದಾಖಲೆಗಳನ್ನು ಕೋರಿದ್ದರಿಂದ ಸದರಿ ದಾಖಲೆಗಳನ್ನು ಸಹ ಅವರಿಗೆ ಒದಗಿಸಲಾಗಿದ್ದು, ಇಲಾಖಾ ವಿಚಾರಣೆಯು ಚಾಲ್ತಿಯಲ್ಲಿರುತ್ತದೆ.<br>2. ಪ್ರಾದೇಶಿಕ ಸಾರಿಗೆ ಕಛೇರಿ ಎಲೆಕ್ಟ್ರಾನಿಕ್ ಸಿಟಿ ಕಛೇರಿಯಲ್ಲಿ 2005 ರಿಂದ 2023ರವರೆಗೆ ನೋಂದಣಿಯಾದ ಮ್ಯಾಕ್ಸಿಕ್ಯಾಬ್ ಮತ್ತು ಖಾಸಗಿ ಸೇವಾ ವಾಹನಗಳ ಸಂಬಂಧ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಬೆಂಗಳೂರು ಇವರ ವರದಿಯನ್ನು ಸರ್ಕಾರದ ದಿನಾಂಕ:17.05.2024 ರ ಪತ್ರದೊಂದಿಗೆ</td></tr>
</table>

| | | |
|---|---|---|
| | | ಸ್ವೀಕರಿಸಲಾಗಿರುತ್ತದೆ. ಸದರಿ ವರದಿಯನ್ನು ಪರಿಶೀಲಿಸಿ, ಕಡಿಮೆ ನೆಲವಿಸ್ತೀರ್ಣ ನಮೂದಿಸಿ ತೆರಿಗೆ ವಂಚನೆ ಮಾಡಿರುವ ಪ್ರಕರಣಕ್ಕೆ ಕಾರಣರಾದ ಹಿರಿಯ ಮೋಟಾರು ವಾಹನ ನಿರೀಕ್ಷಕರು / ಮೋಟಾರು ವಾಹನ ನಿರೀಕ್ಷಕರುಗಳ ವಿವರಗಳನ್ನು ಹಾಗೂ ಅವರಿಂದಾಗಿರುವ ವ್ಯತ್ಯಾಸದ ಮೊತ್ತವನ್ನು ನಮೂದಿಸಿ ವರದಿ ಸಲ್ಲಿಸುವಂತೆ ಮತ್ತು ಕಡಿಮೆ ನೆಲವಿಸ್ತೀರ್ಣ ನಮೂದಿಸಿ ನೋಂದಣಿ ಮಾಡಿರುವ ವಾಹನಗಳನ್ನು ಭೌತಿಕವಾಗಿ ಪರಿಶೀಲಿಸಿ ವ್ಯತ್ಯಾಸವಿದ್ದಲ್ಲಿ ಜಪ್ತಿ ಮಾಡಿ ತೆರಿಗೆಯನ್ನು ವಸೂಲಿಸಲು ಕ್ರಮ ವಹಿಸುವಂತೆ ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ) ವಿಭಾಗ ಇವರಿಗೆ ವಹಿಸಲಾಗಿದ್ದು, ವರದಿ ನಿರೀಕ್ಷಿಸಿದೆ. |
| ಇ. | ಆರ್.ಟಿ.ಓ. ಕಛೇರಿಗಳಲ್ಲಿ ಅಧಿಕಾರಿಗಳಿಗಿಂತ ಏಜೆಂಟ್‌ಗಳ ಹಾವಳಿಯೇ ಹೆಚ್ಚಾಗಿದ್ದು, ಆರ್.ಸಿ. ಕಾರ್ಡ್ ಮತ್ತು ಡಿ.ಎಲ್. ಗಳ ಹಂಚಿಕೆಯು ಏಜೆಂಟ್‌ಗಳಿಂದಲೇ ಹೆಚ್ಚಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಟಿಡಿ 282 ಟಿಡಿಓ 2021, ದಿನಾಂಕ:15-12-2021 ಮತ್ತು 23-05-2022 ರಲ್ಲಿ ರಾಜ್ಯದ ಎಲ್ಲಾ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಮುದ್ರಿತವಾಗುವ ಚಾಲನಾ ಅನುಜ್ಞಾ ಪತ್ರ ಮತ್ತು ನೋಂದಣಿ ಪ್ರಮಾಣಪತ್ರ ಸ್ಮಾರ್ಟ್ ಕಾರ್ಡ್ ಗಳನ್ನು ಅರ್ಜಿದಾರರಿಗೆ ಸ್ಪೀಡ್ ಪೋಸ್ಟ್ ಮುಖಾಂತರ ರವಾನಿಸಲು ಅಂಚೆ ಲಕೋಟೆ ಮತ್ತು ಸ್ಪೀಡ್ ಪೋಸ್ಟ್ ಅಂಚೆ ಚೀಟಿ ಶುಲ್ಕವನ್ನು ಅರ್ಜಿದಾರರಿಂದ ಪಡೆದು ಸ್ಪೀಡ್ ಪೋಸ್ಟ್ ಅಂಚೆ ಮುಖಾಂತರ ಚಾಲನಾ ಅನುಜ್ಞಾ ಪತ್ರ ಸ್ಮಾರ್ಟ್ ಕಾರ್ಡ್ ಗಳನ್ನು ರವಾನಿಸಲು ಆದೇಶಿಸಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅಂಚೆ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡು ಸೆಪ್ಟೆಂಬರ್-2023 ರಿಂದ ಅಧೀನ ಕಛೇರಿಗಳಲ್ಲಿ ಮುದ್ರಿತವಾಗುವ ಹೊಸ ಚಾಲನಾ ಅನುಜ್ಞಾ ಪತ್ರ (DL) ಮತ್ತು ಹೊಸ ನೋಂದಣಿ ಪ್ರಮಾಣಪತ್ರ (RC) ಸ್ಮಾರ್ಟ್ ಕಾರ್ಡ್ ಗಳನ್ನು ಅರ್ಜಿದಾರರಿಗೆ ಸ್ಪೀಡ್ ಪೋಸ್ಟ್ ಮುಖಾಂತರ ರವಾನಿಸಲಾಗುತ್ತಿದೆ.<br><br>ಸಾರ್ವಜನಿಕರು ಮಧ್ಯವರ್ತಿಗಳನ್ನು ಸಂಪರ್ಕಿಸದೇ ನೇರವಾಗಿ ಕಛೇರಿಯ ಅಧಿಕಾರಿ/ ಸಿಬ್ಬಂದಿಯವರನ್ನು ಭೇಟಿ ಮಾಡಿ ಅವರ ಕೆಲಸಗಳನ್ನು ಮಾಡಿಸಿಕೊಳ್ಳಬೇಕೆಂದು ಕಛೇರಿಯ ಆವರಣದಲ್ಲಿ ಸೂಚನಾ ಫಲಕಗಳನ್ನು ಅಳವಡಿಸಿರುವುದಲ್ಲದೆ, ಎಲ್ಲಾ ಅಧೀನ ಕಛೇರಿಗಳಲ್ಲಿ ಸಹಾಯಕ ಮೇಜನ್ನು ಪ್ರವೇಶ ದ್ವಾರದ ಬಳಿ ಕಡ್ಡಾಯವಾಗಿ ನಿರ್ವಹಿಸಬೇಕಾಗಿದ್ದು, ಅಲ್ಲಿ ಕರ್ತವ್ಯ ನಿರ್ವಹಿಸುವ ನೌಕರರು ಕಛೇರಿಗೆ ಭೇಟಿ ನೀಡುವ ಸಾರ್ವಜನಿಕರ ವಿವರಗಳನ್ನು ಪಡೆದು ಅವರಿಗೆ ಕಛೇರಿ ಕೆಲಸಗಳಿಗೆ ಅನುವಾಗುವಂತೆ ಸೂಕ್ತ ಮಾಹಿತಿ/ ಸಲಹೆಗಳನ್ನು ನೀಡಲು ಮತ್ತು ಅನಧಿಕೃತ ವ್ಯಕ್ತಿಗಳ ಹಸ್ತಕ್ಷೇಪ ತಪ್ಪಿಸಿ ಸಾರ್ವಜನಿಕ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸೂಕ್ತ ಕ್ರಮ ವಹಿಸುವುದು.<br><br>ಕಛೇರಿಯಲ್ಲಿ ಸ್ವೀಕೃತವಾಗುವ ಎಲ್ಲಾ ಅರ್ಜಿ / ಸ್ವೀಕೃತಿಗಳನ್ನು ಈ ಕೆಳಕಂಡ ನಮೂನೆಯಲ್ಲಿ ವಿಷಯನಿರ್ವಾಹಕರು ಕಡ್ಡಾಯವಾಗಿ ವಹಿಗಳನ್ನು ನಿರ್ವಹಿಸುವುದು. ಅಧೀಕ್ಷಕರುಗಳು ಪ್ರತಿ ವಾರಕ್ಕೊಮ್ಮೆ ಸದರಿ ವಹಿಗಳನ್ನು ಪರಿಶೀಲಿಸುವುದು ಹಾಗೂ ತಿಂಗಳಿಗೊಮ್ಮೆ ಮೇಜು ತಪಾಸಣೆಯನ್ನು ನಡೆಸಿ ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸುವಂತೆ ಸಾರಿಗೆ ಆಯುಕ್ತರ ಕಛೇರಿಯ ಸುತ್ತೋಲೆ ದಿನಾಂಕ: 08-08-2025 ರಲ್ಲಿ |

ಸೂಚನೆಗಳನ್ನು ಸಹ ನೀಡಲಾಗಿರುತ್ತದೆ. ಸುತ್ತೋಲೆಯ ಪ್ರತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.

ಮುಂದುವರೆದು, ಕಛೇರಿಗಳಲ್ಲಿ ಮಧ್ಯವರ್ತಿಗಳಿಗೆ ಯಾವುದೇ ರೀತಿಯ ಅವಕಾಶ ಕಲ್ಪಿಸದಂತೆ ಕರ್ತವ್ಯ ನಿರ್ವಹಿಸುವಂತೆ ಒಂದು ವೇಳೆ ಯಾವುದೇ ಕಛೇರಿಯಲ್ಲಿ ಮಧ್ಯವರ್ತಿಗಳು ಕಂಡುಬಂದಲ್ಲಿ ಆಯಾ ಕಛೇರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಸೂಚನೆ ನೀಡಿರುತ್ತೇನೆ.

ಅಲ್ಲದೆ, ದಿನಾಂಕ: 01-11-2021 ರಿಂದ ಸಾರಿಗೆ ಇಲಾಖೆಯಲ್ಲಿನ 52 ಸೇವೆಗಳನ್ನು ಆನ್‌ಲೈನ್ ಮುಖಾಂತರ ಒದಗಿಸಲಾಗುತ್ತಿದೆ.

ಚಾಲನಾ ಅನುಜ್ಞಾ ಪತ್ರ (DL) ಮತ್ತು ನೋಂದಣಿ ಪ್ರಮಾಣಪತ್ರ (RC) ಸೇವೆಗಳನ್ನು ಎನ್.ಐ.ಸಿ.ರವರು ಅಭಿವೃದ್ಧಿಪಡಿಸಿರುವ ಕೇಂದ್ರಿಕೃತ ವೆಬ್ ಆಧಾರಿತ ಸಾರಥಿ ಮತ್ತು ವಾಹನ್ ತಂತ್ರಾಂಶದ ಮೂಲಕ ಮೇಲ್ಕಂಡ 24 ಸೇವೆಗಳನ್ನು ಸಾರ್ವಜನಿಕರು / ಅರ್ಜಿದಾರರು ತಾವಿರುವ ಸ್ಥಳಗಳಿಂದನೇ ಆನ್ ಲೈನ್ ಮೂಲಕ ಆಧಾರ್ / ಮೊಬೈಲ್ ಒಟಿಪಿ ಮೂಲಕ ಅರ್ಜಿ ಸಲ್ಲಿಸಿ ಆನ್ ಲೈನ್ ನಲ್ಲಿಯೇ ನಿಗದಿತ ದಾಖಲಾತಿಗಳನ್ನು ಅಪ್ಲೋಡ್ ಮಾಡಿ ನಿಗದಿತ ಶುಲ್ಕವನ್ನು ಆನ್ ಲೈನ್ ಮೂಲಕ ಪಾವತಿಸಿ ಕಛೇರಿಗೆ ಭೇಟಿ ನೀಡದೆ ಸಂಪರ್ಕರಹಿತವಾಗಿ ತಾವಿರುವ ಸ್ಥಳಗಳಿಂದನೇ ಸೇವೆಗಳನ್ನು ಪಡೆಯಬಹುದಾಗಿರುತ್ತದೆ. ಸೇವೆಗಳ ವಿವರಗಳು ಈ ಕೆಳಕಂಡಂತಿವೆ:

**ಕಲಿಕಾ / ಚಾಲನಾ ಅನುಜ್ಞಾ ಪತ್ರ ಸೇವೆಗಳು (ಸಾರಥಿ)**
**<u>ಸಂಪರ್ಕರಹಿತ ಸೇವೆಗಳ ಪಟ್ಟಿ</u>**

| ಕ್ರಮ ಸಂಖ್ಯೆ | ಸೇವೆಯ ಹೆಸರು |
|---|---|
| 1 | ಕಲಿಕಾ ಚಾಲನಾ ಅನುಜ್ಞಾ ಪತ್ರ |
| 2 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 3 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 4 | ನಕಲು ಕಲಿಕಾ ಚಾಲನಾ ಅನುಜ್ಞಾ ಪತ್ರ |
| 5 | ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 6 | ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 7 | ನಕಲು ಚಾಲನಾ ಅನುಜ್ಞಾ ಪತ್ರ |
| 8 | ಚಾಲನಾ ಅನುಜ್ಞಾ ಪತ್ರ ನವೀಕರಣ |
| 9 | ಅಂತರರಾಷ್ಟ್ರೀಯ ಚಾಲನಾ ಪರವಾನಗಿ ನೀಡುವಿಕೆ |
| 10 | ಚಾಲನಾ ಅನುಜ್ಞಾ ಪತ್ರ ವಹಿ |
| 11 | ಬ್ಯಾಡ್ಜ್ ನೊಂದಿಗೆ ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನೀಡಿಕೆ |
| 12 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನವೀಕರಣ |
| 13 | ನಕಲು ನಿರ್ವಾಹಕ ಚಾಲನಾ ಅನುಜ್ಞಾ ಪತ್ರ |
| 14 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |

| | |
|---|---|
| 15 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |

**ವಾಹನ ನೋಂದಣಿ ಪ್ರಮಾಣಪತ್ರ ಸೇವೆಗಳು (ವಾಹನ್) ಸಂಪರ್ಕರಹಿತ ಸೇವೆಗಳ ಪಟ್ಟಿ**

| ಕ್ರಮ ಸಂಖ್ಯೆ | ಸೇವೆಯ ಹೆಸರು |
|---|---|
| 1 | ವಾಹನದ (ಫುಲ್ಲಿ ಬಿಲ್ಟ್) ಹೊಸ ನೋಂದಣಿಗೆ ಅರ್ಜಿ |
| 2 | ಮೋಟಾರು ವಾಹನ ತೆರಿಗೆ |
| 3 | ವಾಹನದ 'ಬಿ' ವಹಿ |
| 4 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳಿಗೆ ಹೊಸ ರಹದಾರಿ ನೀಡಿಕೆ |
| 5 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳ ರಹದಾರಿ ನವೀಕರಣ |
| 6 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳ ನಕಲು ರಹದಾರಿ |
| 7 | ಪ್ರಯಾಣಿಕರ ವಾಹನಗಳಿಗೆ ವಿಶೇಷ ರಹದಾರಿ ನೀಡಿಕೆ |
| 8 | ಸರಕು ಸಾಗಣೆ ವಾಹನಗಳಿಗೆ ತಾತ್ಕಾಲಿಕ ರಹದಾರಿ ನೀಡಿಕೆ |
| 9 | ರಹದಾರಿ ಅಧ್ಯರ್ಪಣೆ / ರದ್ದತಿ |

ಚಾಲನಾ ಅನುಜ್ಞಾ ಪತ್ರ (DL) ಮತ್ತು ನೋಂದಣಿ ಪ್ರಮಾಣಪತ್ರ (RC) ಸೇವೆಗಳನ್ನು ಎನ್.ಐ.ಸಿ.ರವರು ಅಭಿವೃದ್ಧಿಪಡಿಸಿರುವ ಕೇಂದ್ರೀಕೃತ ವೆಬ್ ಆಧಾರಿತ ಸಾರಥಿ ಮತ್ತು ವಾಹನ್ ತಂತ್ರಾಂಶದ ಮೂಲಕ ಮೇಲ್ಕಂಡ 28 ಸೇವೆಗಳನ್ನು ಸಾರ್ವಜನಿಕರು / ಅರ್ಜಿದಾರರು ಆನ್ ಲೈನ್ ಮೂಲಕ ಆಧಾರ್ / ಮೊಬೈಲ್ ಒಟಿಪಿ ಮೂಲಕ ಅರ್ಜಿ ಸಲ್ಲಿಸಿ ಆನ್ ಲೈನ್ ನಲ್ಲಿಯೇ ನಿಗದಿತ ದಾಖಲಾತಿಗಳನ್ನು ಅಪ್ಲೋಡ್ ಮಾಡಿ ನಿಗದಿತ ಶುಲ್ಕವನ್ನು ಆನ್ ಲೈನ್ ಮೂಲಕ ಪಾವತಿಸಿ ಕಛೇರಿಗೆ ಭೇಟಿ ನೀಡಿ ಸೇವೆಗಳನ್ನು ಪಡೆಯಬಹುದಾಗಿರುತ್ತದೆ. ಸೇವೆಗಳ ವಿವರಗಳು ಈ ಕೆಳಕಂಡಂತಿವೆ:

**ಕಲಿಕಾ / ಚಾಲನಾ ಅನುಜ್ಞಾ ಪತ್ರ ಸೇವೆಗಳು (ಸಾರಥಿ) ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿ ಕಛೇರಿಗೆ ಭೇಟಿ ನೀಡಿ ಪಡೆಯಬಹುದಾದ ಸೇವೆಗಳ ಪಟ್ಟಿ**

| ಕ್ರಮ ಸಂಖ್ಯೆ | ಸೇವೆಯ ಹೆಸರು |
|---|---|
| 1 | ಹೊಸ ಚಾಲನಾ ಅನುಜ್ಞಾ ಪತ್ರ |
| 2 | ಹೊರದೇಶದವರಿಗ / ರಕ್ಷಣಾ ಇಲಾಖೆಯವರಿಗ ಹೊಸ ಚಾಲನಾ ಅನುಜ್ಞಾ ಪತ್ರ |
| 3 | ಚಾಲನಾ ಅನುಜ್ಞಾ ಪತ್ರದಲ್ಲಿ ಹೊಸ ವಾಹನ ವರ್ಗ ಸೇರ್ಪಡೆ |
| 4 | ರಕ್ಷಣಾ ಇಲಾಖೆಯ್ಯವರು ಹೊಂದಿರುವ ಚಾಲನಾ ಅನುಜ್ಞಾ ಪತ್ರದಲ್ಲಿ ಹೊಸ ವಾಹನ ವರ್ಗ ಸೇರ್ಪಡೆ |
| 5 | ಅವಧಿ ಮೀರಿದ ಚಾಲನಾ ಅನುಜ್ಞಾ ಪತ್ರದ ನವೀಕರಣ |
| 6 | ಬದಲಿ ಚಾಲನಾ ಅನುಜ್ಞಾ ಪತ್ರ |
| 7 | ಚಾಲಕರಿಗ ಸಾರ್ವಜನಿಕ ಸೇವಾ ವಾಹನ ಬ್ಯಾಡ್ಜ್ ವಿತರಣೆ |
| 8 | ಚಾಲನಾ ಅನುಜ್ಞಾ ಪತ್ರದಲ್ಲಿನ ಛಾಯಾಚಿತ್ರ ಮತ್ತು ಸಹಿಗಳ ಬದಲಾವಣೆ |
| 9 | ಚಾಲನಾ ಅನುಜ್ಞಾ ಪತ್ರಗಳನ್ನು ಒಂದುಗೂಡಿಸುವುದು |

| ಕ್ರಮ ಸಂಖ್ಯೆ | ಸೇವೆಯ ಹೆಸರು |
|---|---|
| 10 | ಅಪಾಯಕಾರಿ ವಸ್ತುಗಳನ್ನು ಸಾಗಿಸುವ ವಾಹನಗಳನ್ನು ಓಡಿಸಲು ಚಾಲನಾ ಅನುಜ್ಞಾ ಪತ್ರದಲ್ಲಿ ಹಿಂಬರಹ ನೀಡುವಿಕೆ |
| 11 | ಗುಡ್ಡಗಾಡು / ಬೆಟ್ಟದ ಪ್ರದೇಶದಲ್ಲಿ ವಾಹನಗಳನ್ನು ಓಡಿಸಲು ಚಾಲನಾ ಅನುಜ್ಞಾ ಪತ್ರದಲ್ಲಿ ಹಿಂಬರಹ ನೀಡುವಿಕೆ |
| 12 | ಚಾಲನಾ ಅನುಜ್ಞಾ ಪತ್ರದಲ್ಲಿನ ವಾಹನ ವರ್ಗವನ್ನು ಸರೆಂಡೆರ್ ಮಾಡುವುದು |
| 13 | ಹೊಸ ವಾಹನ ಚಾಲನಾ ತರಬೇತಿ ಶಾಲೆ ತೆರೆಯಲು ಅನುಜ್ಞಾ ಪತ್ರ |
| 14 | ನಕಲು ವಾಹನ ಚಾಲನಾ ತರಬೇತಿ ಶಾಲೆ ಅನುಜ್ಞಾ ಪತ್ರ |
| 15 | ವಾಹನ ಚಾಲನಾ ತರಬೇತಿ ಶಾಲೆಯ ಅನುಜ್ಞಾ ಪತ್ರ ನವೀಕರಣ |
| 16 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ಬಯೋಮೆಟ್ರಿಕ್ ಬದಲಾವಣೆ |

**ವಾಹನ ನೋಂದಣಿ ಪ್ರಮಾಣಪತ್ರ ಸೇವೆಗಳು (ವಾಹನ್) ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿ ಕಛೇರಿಗೆ ಭೇಟಿ ನೀಡಿ ಪಡೆಯಬಹುದಾದ ಸೇವೆಗಳ ಪಟ್ಟಿ.**

| ಕ್ರಮ ಸಂಖ್ಯೆ | ಸೇವೆಯ ಹೆಸರು |
|---|---|
| 1 | ಟ್ರೇಡ್ ಸರ್ಟಿಫಿಕೇಟ್ ನೀಡಿಕೆ |
| 2 | ಟ್ರೇಡ್ ಸರ್ಟಿಫಿಕೇಟ್ ನವೀಕರಣ |
| 3 | ಟ್ರೇಡ್ ಸರ್ಟಿಫಿಕೇಟ್ ನಲ್ಲಿ ಹೆಚ್ಚುವರಿ ಟ್ರೇಡ್ ಸರ್ಟಿಫಿಕೇಟ್ ಸೇರ್ಪಡೆಗೆ ಹಿಂಬರಹ |
| 4 | ಟ್ರೇಡ್ ಸರ್ಟಿಫಿಕೇಟ್ ನಲ್ಲಿ ಹೆಚ್ಚುವರಿ ವಾಹನ ವರ್ಗ ಸೇರ್ಪಡೆ |
| 5 | ಅರ್ಹತಾ ಪ್ರಮಾಣಪತ್ರ ನೀಡಿಕೆ |
| 6 | ನಕಲು ಅರ್ಹತಾ ಪ್ರಮಾಣಪತ್ರ ನೀಡಿಕೆ |
| 7 | ನೋಂದಣಿ ಪ್ರಮಾಣಪತ್ರ ನವೀಕರಣ |
| 8 | ಹೊರರಾಜ್ಯದ ವಾಹನಗಳಿಗೆ ಕರ್ನಾಟಕ ರಾಜ್ಯದ ನೋಂದಣಿ ಸಂಖ್ಯೆ ನೀಡಿಕೆ |
| 9 | ಮೋಟಾರು ವಾಹನದಲ್ಲಿ ಬದಲಾವಣೆ |
| 10 | ವಾಹನ ನೋಂದಣಿ ಪ್ರಮಾಣಪತ್ರ ಅಧ್ಯರ್ಪಣೆ |
| 11 | ಕಂತು-ಕರಾರು ರದ್ದತಿ |
| 12 | ಮ್ಯಾಕ್ಸಿಕ್ಯಾಬ್ ವಾಹನಗಳಿಗೆ ಕಾಂಟ್ರಾಕ್ಟ್ ಕ್ಯಾರೇಜ್ ರಹದಾರಿ ನೀಡಿಕೆ |

| | | |
|---|---|---|
| | ಈ ಬಂದಿದ್ದಲ್ಲಿ, ಈ ಎಲ್ಲಾ ವಿಷಯಗಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; ಮುಂದಿನ ದಿನಗಳಲ್ಲಿ ಈ ರೀತಿಯ ಅಕ್ರಮಗಳನ್ನು ತಡೆಯಲು ತೆಗೆದುಕೊಂಡ ಮುನ್ನೆಚ್ಚರಿಕಾ ಕ್ರಮಗಳಾವುವು? | • ಸಾರ್ವಜನಿಕರು ಮಧ್ಯವರ್ತಿಗಳನ್ನು ಸಂಪರ್ಕಿಸದೇ ನೇರವಾಗಿ ಕಛೇರಿಯ ಅಧಿಕಾರಿ/ ಸಿಬ್ಬಂದಿಯವರನ್ನು ಭೇಟಿ ಮಾಡಿ ಅವರ ಕೆಲಸಗಳನ್ನು ಮಾಡಿಸಿಕೊಳ್ಳಬೇಕೆಂದು ಕಛೇರಿಯ ಆವರಣದಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.<br>• ಲೋಕಾಯುಕ್ತರವರ ಕಛೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳ ವಿವರಗಳ ಮಾಹಿತಿಯನ್ನು ಸೂಚನಾ ಫಲಕಗಳಲ್ಲಿ ಪ್ರದರ್ಶಿಸಲಾಗಿದೆ.<br>• ಅಲ್ಲದೆ, ದಿನಾಂಕ: 01-11-2021 ರಿಂದ ಸಾರಿಗೆ ಇಲಾಖೆಯಲ್ಲಿನ 52 ಸೇವೆಗಳನ್ನು ಆನ್‌ಲೈನ್ ಮುಖಾಂತರ ಒದಗಿಸಲಾಗುತ್ತಿದೆ.<br>• ಚಾಲನಾ ಅನುಜ್ಞಾ ಪತ್ರ (DL) ಮತ್ತು ನೋಂದಣಿ ಪ್ರಮಾಣಪತ್ರ (RC) ಸೇವೆಗಳನ್ನು ಎನ್.ಐ.ಸಿ.ರವರು ಅಭಿವೃದ್ಧಿಪಡಿಸಿರುವ ಕೇಂದ್ರಿಕೃತ ವೆಬ್ ಆಧಾರಿತ ಸಾರಥಿ ಮತ್ತು ವಾಹನ್ ತಂತ್ರಾಂಶದ ಮೂಲಕ ಮೇಲ್ಕಂಡ 24 ಸೇವೆಗಳನ್ನು ಸಾರ್ವಜನಿಕರು / ಅರ್ಜಿದಾರರು ತಾವಿರುವ ಸ್ಥಳಗಳಿಂದನೇ ಆನ್ ಲೈನ್ ಮೂಲಕ ಆಧಾರ್ / ಮೊಬೈಲ್ ಒಟಿಪಿ ಮೂಲಕ ಅರ್ಜಿ ಸಲ್ಲಿಸಿ ಆನ್ ಲೈನ್ ನಲ್ಲಿಯೇ ನಿಗದಿತ ದಾಖಲಾತಿಗಳನ್ನು ಅಪ್ಲೋಡ್ ಮಾಡಿ |

| | | |
|---|---|---|
| | | ನಿಗದಿತ ಶುಲ್ಕವನ್ನು ಆನ್ ಲೈನ್ ಮೂಲಕ ಪಾವತಿಸಿ ಕಛೇರಿಗೆ ಭೇಟಿ ನೀಡದೆ ಸಂಪರ್ಕರಹಿತವಾಗಿ ತಾವಿರುವ ಸ್ಥಳಗಳಿಂದನೇ ಸೇವೆಗಳನ್ನು ಪಡೆಯ ಬಹುದಾಗಿರುತ್ತದೆ.<br>• ಚಾಲನಾ ಅನುಜ್ಞಾ ಪತ್ರ (DL) ಮತ್ತು ನೋಂದಣಿ ಪ್ರಮಾಣಪತ್ರ (RC) ಸೇವೆಗಳನ್ನು ಎನ್.ಐ.ಸಿ.ರವರು ಅಭಿವೃದ್ಧಿಪಡಿಸಿರುವ ಕೇಂದ್ರಿಕೃತ ವೆಬ್ ಆಧಾರಿತ ಸಾರಥಿ ಮತ್ತು ವಾಹನ್ ತಂತ್ರಾಂಶದ ಮೂಲಕ ಮೇಲ್ಕಂಡ 28 ಸೇವೆಗಳನ್ನು ಸಾರ್ವಜನಿಕರು / ಅರ್ಜಿದಾರರು ಆನ್ ಲೈನ್ ಮೂಲಕ ಆಧಾರ್ / ಮೊಬೈಲ್ ಒಟಿಪಿ ಮೂಲಕ ಅರ್ಜಿ ಸಲ್ಲಿಸಿ ಆನ್ ಲೈನ್ ನಲ್ಲಿಯೇ ನಿಗದಿತ ದಾಖಲಾತಿಗಳನ್ನು ಅಪ್ಲೋಡ್ ಮಾಡಿ ನಿಗದಿತ ಶುಲ್ಕವನ್ನು ಆನ್ ಲೈನ್ ಮೂಲಕ ಪಾವತಿಸಿ ಕಛೇರಿಗೆ ಭೇಟಿ ನೀಡಿ ಸೇವೆಗಳನ್ನು ಪಡೆಯಬಹುದಾಗಿರುತ್ತದೆ.<br>• ಸಾರ್ವಜನಿಕರಿಗೆ ಅವರುಗಳ ವಾಹನ ಅನುಜ್ಞಾ ಪತ್ರ ಮತ್ತು ವಾಹನ ನೋಂದಣಿಯ ಸ್ಮಾರ್ಟ್ ಕಾರ್ಡ್‌ಗಳನ್ನು ಅವರ ಮನೆಯ ವಿಳಾಸಗಳಿಗೆ ಅಂಚೆ ಸೇವೆಯ ಮೂಲಕ ತಲುಪಿಸಲಾಗುತ್ತಿದೆ. ಇಲಾಖೆಯಲ್ಲಿ ವಾಹನ್-4, ಸಾರಥಿ-4 ಮತ್ತು ಇ-ಪೇಮೆಂಟ್ ಆಫ್ ಟ್ಯಾಕ್ಸ್ ನಂತಹ ಆನ್‌ಲೈನ್ ಸೇವೆಗಳನ್ನು ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಜಾರಿಗೆ ತರಲಾಗಿದೆ ಹಾಗೂ ಸಾರ್ವಜನಿಕರು ಕರ್ನಾಟಕ-1 ಹಾಗೂ ಬೆಂಗಳೂರು-1 ಎಂಬ ಆ್ಯಪ್‌ಗಳಲ್ಲಿ ವಾಹನ ವಿವರ / ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ. |

**ಟಿಡಿ 78 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

ಅನುಬಂಧ

ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂಖ್ಯೆ: ಸಾಆ/ಸಿಬ್ಬಂದಿ-3/ವೈವ-156/2019-20

ಸಾರಿಗೆ ಮತ್ತು ರಸ್ತೆ ಸುರಕ್ಷತೆ
ಆಯುಕ್ತರ ಕಛೇರಿ, 1ನೇ ಮಹಡಿ,
ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಹೆಚ್. ರಸ್ತೆ,
ಶಾಂತಿನಗರ, ಬೆಂಗಳೂರು-27,
ದಿನಾಂಕ: 08-08-2025.

**"ಸುತ್ತೋಲೆ"**

ವಿಷಯ : ಸಾರಿಗೆ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರು ಕಡ್ಡಾಯವಾಗಿ ನಿಯಮಗಳನ್ನು ಪಾಲನೆ ಮಾಡುವ ಕುರಿತು.

ಉಲ್ಲೇಖ :
1) ಸರ್ಕಾರದ ಸುತ್ತೋಲೆ ಸಂಖ್ಯೆ: DPAR (AR) 21 KTV 2022, ದಿನಾಂಕ: 04-02-2022.
2) ಈ ಕಛೇರಿಯ ಇದೇ ಸಂಖ್ಯೆಯ ಸುತ್ತೋಲೆ ದಿನಾಂಕ: 16-08-2022.
3) ಈ ಕಛೇರಿಯ ಇದೇ ಸಂಖ್ಯೆಯ ಸುತ್ತೋಲೆ ದಿನಾಂಕ: 30-11-2022.
4) ಈ ಕಛೇರಿಯ ಇದೇ ಸಂಖ್ಯೆಯ ಸುತ್ತೋಲೆ ದಿನಾಂಕ: 04-08-2023.
5) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ(ಆಸು) 21 ಕತವ 2022, ದಿನಾಂಕ: 14-03-2022.

*****

ಉಲ್ಲೇಖ (2) ರಿಂದ (4)ರವರೆಗಿನ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರು ಹಾಗೂ ಇತರೆ ಎಲ್ಲಾ ಸಿಬ್ಬಂದಿಗಳು ಕೆಲ ಸೂಚನೆಗಳನ್ನು ಪಾಲಿಸುವಂತೆ ತಿಳಿಸಲಾಗಿದೆ. ಆದರೆ ಹಲವು ಕಛೇರಿಗಳಲ್ಲಿ ಸದರಿ ಸೂಚನೆಗಳನ್ನು ಪಾಲಿಸದೇ ಇರುವುದು ಕಂಡುಬಂದಿದ್ದು, ಇನ್ನು ಮುಂದೆ ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಲಾಗಿದೆ.

1) ಕಛೇರಿಗೆ ಪ್ರತಿ ದಿನ ಬೆಳಿಗ್ಗೆ 10.00 ಗಂಟೆಗೆ ಕಡ್ಡಾಯವಾಗಿ ಹಾಜರಾಗಿ ಬಯೋಮೆಟ್ರಿಕ್ ಹಾಜರಾತಿಯನ್ನೂ ಸಹ ನಮೂದಿಸತಕ್ಕದ್ದು.
2) ಕಛೇರಿಯ ಸಮಯದಲ್ಲಿ ಎಲ್ಲಾ ಅಧಿಕಾರಿ/ ನೌಕರರು ಇಲಾಖೆಯು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸತಕ್ಕದ್ದು.
3) ನಗದು ಘೋಷಣಾ ವಹಿ ಹಾಗೂ ಚಲನವಲನ ವಹಿಗಳನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.

ನಗದು ಘೋಷಣೆ ವಹಿ

ಮಾಹೆ: ವರ್ಷ:

| ಕ್ರ ಸಂ. | ಪದನಾಮ ಮತ್ತು ಹುದ್ದೆ | ಕಛೇರಿಗೆ ಆಗಮಿಸಿದ ಸಮಯ | ಮೊತ್ತ | ಕಛೇರಿಯಿಂದ ನಿರ್ಗಮಿಸಿದ ಸಮಯ | ಮೊತ್ತ | ಸಿಬ್ಬಂದಿ/ ಅಧಿಕಾರಿ ಸಹಿ | ಪರಿಶೀಲಿಸುವ ಅಧಿಕಾರಿಯ ಸಹಿ |
|---|---|---|---|---|---|---|---|
| | | | | | | | |

4) ಹಿರಿಯ ಮೋಟಾರು ವಾಹನ ನಿರೀಕ್ಷಕರು ಹಾಗೂ ಮೋಟಾರು ವಾಹನ ನಿರೀಕ್ಷಕರು ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸಿರತಕ್ಕದ್ದು.

5) ಅಟೆಂಡರ್, ಗ್ರೂಪ್-ಡಿ ನೌಕರರು ಹಾಗೂ ಹೋಂ ಗಾರ್ಡ್ ಸಿಬ್ಬಂದಿಗಳು ಕಛೇರಿಯ ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಸಮವಸ್ತ್ರಗಳನ್ನು ಧರಿಸಿರತಕ್ಕದ್ದು.

6) ಕಛೇರಿಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಅಧಿಕಾರಿ ಹಾಗೂ ನೌಕರರುಗಳು ಶೋಭೆ ತರುವಂತಹ ಸಭ್ಯ ವಸ್ತ್ರಗಳನ್ನು ಧರಿಸಿರತಕ್ಕದ್ದು.

7) ಎಲ್ಲಾ ಅಧೀನ ಕಛೇರಿಗಳಲ್ಲಿ ಸಹಾಯಕ ಮೇಜನ್ನು ಪ್ರವೇಶ ದ್ವಾರದ ಬಳಿ ಕಡ್ಡಾಯವಾಗಿ ನಿರ್ವಹಿಸಬೇಕಾಗಿದ್ದು, ಅಲ್ಲಿ ಕರ್ತವ್ಯ ನಿರ್ವಹಿಸುವ ನೌಕರರು ಕಛೇರಿಗೆ ಭೇಟಿ ನೀಡುವ ಸಾರ್ವಜನಿಕರ ವಿವರಗಳನ್ನು ಪಡೆದು ಅವರಿಗೆ ಕಛೇರಿ ಕೆಲಸಗಳಿಗೆ ಅನುವಾಗುವಂತೆ ಸೂಕ್ತ ಮಾಹಿತಿ/ ಸಲಹೆಗಳನ್ನು ನೀಡಲು ಮತ್ತು ಅನಧಿಕೃತ ವ್ಯಕ್ತಿಗಳ ಹಸ್ತಕ್ಷೇಪ ತಪ್ಪಿಸಿ ಸಾರ್ವಜನಿಕ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸೂಕ್ತ ಕ್ರಮ ವಹಿಸುವುದು.

8) ಕಛೇರಿಯಲ್ಲಿ ಸ್ವೀಕೃತವಾಗುವ ಎಲ್ಲಾ ಅರ್ಜಿ / ಸ್ವೀಕೃತಿಗಳನ್ನು ಈ ಕೆಳಕಂಡ ನಮೂನೆಯಲ್ಲಿ ವಿಷಯನಿರ್ವಾಹಕರು ಕಡ್ಡಾಯವಾಗಿ ವಹಿಗಳನ್ನು ನಿರ್ವಹಿಸುವುದು. ಅಧೀಕ್ಷಕರುಗಳು ಪ್ರತಿ ವಾರಕ್ಕೊಮ್ಮೆ ಸದರಿ ವಹಿಗಳನ್ನು ಪರಿಶೀಲಿಸುವುದು ಹಾಗೂ ತಿಂಗಳಿಗೊಮ್ಮೆ ಮೇಜು ತಪಾಸಣೆಯನ್ನು ನಡೆಸಿ ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸುವುದು.

**ನಮೂನೆ-1**

| ವೈಯಕ್ತಿಕ ವಹಿ ಕ್ರಸಂ. | ಆವಕ ಸಂಖ್ಯೆ | ಪತ್ರ/ ಅರ್ಜಿದಾರರ ವಿವರ | ಪತ್ರ / ಅರ್ಜಿ ದಿನಾಂಕ | ಸಂಕ್ಷಿಪ್ತ ವಿಷಯ | ಸಕಾಲದಡಿಯಲ್ಲಿ ಸೇವೆ ನೀಡುವ ಅವಧಿ | ವಿಲೇವಾರಿಯಾದ ಅವಧಿ | ಷರಾ |
|---|---|---|---|---|---|---|---|
| (1) | (2) | (3) | (4) | (5) | (6) | (7) | (8) |
| | | | | | | | |

**ನಮೂನೆ-2**

**ಪ್ರತಿ ಮಾಹೆಯ ಕೊನೆಯಲ್ಲಿ ನಿರ್ವಹಿಸಬೇಕಾದ ಘೋಷ್ವಾರೆ**

| ಆರಂಭಿಕ ಅರ್ಜಿಗಳ ಸಂಖ್ಯೆ | ಸದರಿ ತಿಂಗಳಲ್ಲಿ ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ | ಒಟ್ಟು ಅರ್ಜಿಗಳ ಸಂಖ್ಯೆ | ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ | ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ |
|---|---|---|---|---|
| (1) | (2) | (3) | (4) | (5) |
| | | | | |

9) ಮೇಲ್ಕಂಡ ನಿಯಮಗಳನ್ನು ಪಾಲಿಸತಕ್ಕದ್ದು. ಈ ಬಗ್ಗೆ ಕಛೇರಿಯ ಮುಖ್ಯಸ್ಥರು ಹಾಗೂ ವಿಭಾಗೀಯ ಮುಖ್ಯಸ್ಥರುಗಳು ಮೇಲುಸ್ತುವಾರಿ/ ಮೇಲ್ವಿಚಾರಣೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

ಮೇಲ್ಕಂಡ ನಿಯಮಗಳು ಪಾಲನೆಯಾಗದೇ ಇರುವುದು ಕಂಡುಬಂದಲ್ಲಿ, ಕಛೇರಿಯ ಮುಖ್ಯಸ್ಥರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ಜರುಗಿಸಲಾಗುವುದು.

08.02.21

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

ಪ್ರತಿಗಳು:

1) ರಾಜ್ಯದ ಎಲ್ಲಾ ಅಪರ / ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.

2) ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ / ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ (ತನಿಖಾ ಠಾಣೆಗಳೂ ಸೇರಿದಂತೆ) ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.

3) ಸಾರಿಗೆ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ.

4) ಕಛೇರಿ ಪ್ರತಿ.